

ಆದರೆ ಅದೇ ಮನಸ್ಸಿನಲ್ಲಿಟ್ಟುಕೊಂಡು ಹಟ ಮಾಡಬಾರದಲ್ವಾ?'

ಅವಳು ಏನು ಹೇಳಲು ಸಾಧ್ಯ?

ವಿಭಾಗೆ ತಂದೆಯ ಬಗ್ಗೆ ಪ್ರೀತಿ. ಪುರುಷೋತ್ತಮ ರಾವ್ ಇಂಗ್ಲಿಷ್ ಪ್ರೊಫೆಸರ್. ಕಾಲೇಜಿನಲ್ಲಿ ಅವರಿಗೆ ತುಂಬಾ ಒಳ್ಳೆಯ ಹೆಸರಿತ್ತು. ಸಹೋದ್ಯೋಗಿಗಳಿಗೂ ಅವರ ಬಗ್ಗೆ ಗೌರವವಿತ್ತು. ಅವರಿಗೆ 'ಆಪದ್ಬಾಂಧವ' ಎನ್ನುವ ಅಡ್ಡ ಹೆಸರಿತ್ತು. ಮಕ್ಕಳಿಗೆ ಒಳ್ಳೆಯ ಹವ್ಯಾಸ ಬೆಳೆಸಿಕೊಳ್ಳಿ ಎಂದು ಹೇಳುತ್ತಾ ಓದುವ ಹವ್ಯಾಸ ಬೆಳೆಸಿಕೊಳ್ಳಲು ಪ್ರೋತ್ಸಾಹ ನೀಡಿದ್ದರು.

'ಪುಸ್ತಕಗಳು ಒಳ್ಳೆಯ ಸ್ನೇಹಿತರಿದ್ದಂತೆ. ನಿಮ್ಮ ಒಂಟಿತನ ಕಳೆಯುವ ಪರಮೌಷಧ ಪುಸ್ತಕಗಳು' ಎನ್ನುತ್ತಿದ್ದರು. ವಿಭಾಗೆ ತಂದೆಯ ಮಾತೆಂದರೆ ವೇದವಾಕ್ಯ. ಅವರೇ ಅವಳ ಆದರ್ಶವ್ಯಕ್ತಿ. ಅವಳು ಚಿಕ್ಕಂದಿನಿಂದಲೇ ಓದುವ ಹವ್ಯಾಸ ಬೆಳೆಸಿಕೊಂಡಿದ್ದಳು.

ರಾವ್ ಶಿಸ್ತಿನ ಸಿಪಾಯಿ. ಬೆಳಿಗ್ಗೆ ಆರುಗಂಟೆಗೆ ಎದ್ದು ಧ್ಯಾನಮಾಡಿ, ವಾಕಿಂಗ್‌ಗೆ ಹೋಗುತ್ತಿದ್ದರು. ಏಳೂವರೆಗೆ ವಾಪಸ್ಸು ಬಂದು ಕಾಫಿ ಕುಡಿಯುತ್ತಾ, ಪೇಪರ್ ಓದುತ್ತಿದ್ದರು. ನಂತರ ಸ್ನಾನ ಮಾಡಿ ತಿಂಡಿ ತಿಂದು ಲೈಬ್ರರಿಗೆ ಹೋಗಿ ಹತ್ತುಗಂಟೆಯವರೆಗೂ ಏನಾದರೂ ಓದುತ್ತಿರುತ್ತಿದ್ದರು. ನಂತರ ಮತ್ತೊಮ್ಮೆ ಕಾಫಿ ಕುಡಿದು ಕಾಲೇಜ್‌ಗೆ ಹೋಗುತ್ತಿದ್ದರು. ಕಾಲೇಜ್ ಹತ್ತಿರವಿದ್ದುದರಿಂದ ಮಧ್ಯಾಹ್ನ ಊಟಕ್ಕೆ ಬರುತ್ತಿದ್ದರು. ಸಾಯಂಕಾಲ ಕಾಲೇಜ್‌ನಿಂದ ಬಂದು ಟೀ ಜೊತೆ ನಾಲ್ಕು ಬಿಸ್ಕತ್ ತಿಂದು ಕೊಂಚ ವಿಶ್ರಾಂತಿ ಪಡೆಯುತ್ತಿದ್ದರು. ಏಳು ಗಂಟೆಗೆ ಹತ್ತಿರವಿದ್ದ ಪೇಟೆ ಬೀದಿಗೆ ಹೋಗಿ ತರಕಾರಿ ತರುತ್ತಿದ್ದರು. ಒಮ್ಮೊಮ್ಮೆ ರಾಯರ ಮಠಕ್ಕೋ, ಗಣಪತಿ ದೇವಸ್ಥಾನಕ್ಕೋ ಹೋಗಿ ಬರುತ್ತಿದ್ದರು. ನಂತರ ಕೊಂಚ ಹೊತ್ತು ಟಿ.ವಿ. ನೋಡಿ, ಒಂಬತ್ತು ಗಂಟೆಯ ಒಳಗೆ ಎರಡು ಚಪಾತಿ ತಿಂದು ಲೈಬ್ರರಿ ಸೇರುತ್ತಿದ್ದರು.

ಸತ್ಯಭಾಮ ಗ್ರಾಜುಯೇಟ್. ಆದರೆ ಅಕ್ಷರದ್ವೇಷಿ. ಮನೆಗೆ ಬರುತ್ತಿದ್ದ ಪೇಪರ್‌ಗಳನ್ನೂ ಓದುತ್ತಿರಲಿಲ್ಲ. ಗಂಡ–ಮಕ್ಕಳಿಗೆ ಅಚ್ಚುಕಟ್ಟಾಗಿ ಅಡುಗೆ–ತಿಂಡಿ ಮಾಡಿ ಬಡಿಸುತ್ತಿದ್ದರು. ಆದರೆ ಕಾಲಿಗೆ ಚಕ್ರ ಕಟ್ಟಿಕೊಂಡಂತೆ ತಿರುಗುತ್ತಿದ್ದರು. ಮಹಿಳಾ ಸಮಾಜ, ಸ್ತ್ರೀಶಕ್ತಿ ಮಂಡಳಿ, ಭಜನಾಮಂಡಳಿ, ಇನ್ನರ್‌ವೀಲ್ ಕ್ಲಬ್ — ಹೀಗೆ ಹಲವು ಸಂಸ್ಥೆಗಳ ಸಕ್ರಿಯ ಸದಸ್ಯರಾಗಿದ್ದರು. ಶನಿವಾರ, ಭಾನುವಾರಗಳಲ್ಲಿ ಮನೆಯನ್ನೇ ಸೇರುತ್ತಿರಲಿಲ್ಲ. ಗೆಳತಿಯರ ಜೊತೆ ಸಿನಿಮಾ, ನಾಟಕ, ಪ್ರವಾಸ, ಪಿಕ್ನಿಕ್ ಎಂದು ಸುತ್ತುತ್ತಿರುತ್ತಿದ್ದರು. ಆಗೆಲ್ಲಾ ರಾವ್ ಬೇಸರವಿಲ್ಲದೆ ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು. ರಾವ್ ರಜೆ ಸಿಕ್ಕಾಗ ಪ್ರವಾಸಕ್ಕೆ ಕರೆದೊಯ್ಯುತ್ತಿದ್ದರು. ಒಳ್ಳೆಯ ಸಿನಿಮಾಗಳಿಗೆ ತಾವೇ ಮಕ್ಕಳ ಜೊತೆ ಹೊರಡುತ್ತಿದ್ದರು.

ವಿಷ್ಣು ತುಂಬಾ ಚೆನ್ನಾಗಿ ಓದುತ್ತಿದ್ದ. ಅವನಿಗೆ ಸ್ನೇಹಿತರೂ ಹೆಚ್ಚು. ಖರ್ಚೂ ಹೆಚ್ಚು. ಸತ್ಯಭಾಮ ಕದ್ದು ಮುಚ್ಚಿ ಮಗನಿಗೆ ಹಣ ಕೊಡುತ್ತಿದ್ದುದರಿಂದ, ತಾಯಿಯ ಬಳಿ ಸಲಿಗೆಯಿತ್ತು. ತಂದೆಯ ಬಗ್ಗೆ ಭಯವಿತ್ತು. ಸತ್ಯಭಾಮ ಯಾವಾಗಲೂ ಸಿಡಿಮಿಡಿ ಎನ್ನುತ್ತಿದ್ದರು. ತಂದೆ–ತಾಯಿ ಸಂತೋಷದಿಂದ ಒಟ್ಟಿಗೆ ಕುಳಿತು ಮಾತುಕತೆ ಆಡಿದ್ದನ್ನು ವಿಭಾ ನೋಡಿರಲಿಲ್ಲ. ರಾವ್‌ಗೆ ತುಂಬಾ ತಾಳ್ಮೆ. ಅವರು ಯಾರ ಮೇಲೂ ಸಿಡುಕುತ್ತಿರಲಿಲ್ಲ. ಹೆಂಡತಿ ಜೊತೆ ಜಗಳವನ್ನೂ ಆಡುತ್ತಿರಲಿಲ್ಲ.

ವಿಭಾ ಆಗಾಗ್ಗೆ ತಂದೆಯನ್ನು ಕೇಳುತ್ತಿದ್ದಳು. 'ಅಪ್ಪಾ ನಿಮಗೆ ಕೋಪಾನೇ ಬರಲ್ವಾ?'

'ಯಾಕೆ ಹಾಗೆ ಕೇಳ್ತಿದ್ದೀಯ ಪುಟ್ಟಾ?'

'ಅಮ್ಮ ಪ್ರತಿ ವಿಚಾರಕ್ಕೂ ಗೊಣಗ್ತಾನೇ ಇರ್ತಾಳೆ. ನೀವು ಏನೂ ಹೇಳಲ್ಲ. ಜಗಳಾನೂ ಆಡಲ್ಲ.'

'ನಾನು ಜಗಳವಾಡುವುದರಿಂದ ಅವಳು ಬದಲಾಗ್ತಾಳಾ? ಸುಮ್ಮನೆ ಕೂಗಾಟ, ಮನಸ್ತಾಪ, ಬೇಸರ. ಅದರ ಬದಲು ಒಬ್ಬರು ಮೌನವಾಗಿದ್ದರೆ, ಜಗಳಕ್ಕೆ ಆಸ್ಪದಾನೇ ಇರಲ್ಲ ಅಲ್ವಾ?'

'ಆದರೂ...'

'ಮದುವೆಯಾದಾಗಲಿಂದ ನಾನು ನೋಡ್ತಾನೇ ಇದ್ದೀನಿ. ಅವಳನ್ನು ಬದಲಾಯಿಸಕ್ಕೆ ಸಾಧ್ಯವೇ ಇಲ್ಲ ಅನ್ನಿಸಿಬಿಟ್ಟಿದೆ. ಮದುವೆಯಾದ ಹೊಸದರಲ್ಲಿ ನಾನೂ ಕೂಗಾಡ್ತಿರ್ತಿದ್ದೆ. ನೀನು ಹುಟ್ಟಿದ ಮೇಲೆ ನಮ್ಮ ತಂದೆ ಒಂದು ಸಲ ಹೇಳಿದರು, ಮಕ್ಕಳ ಎದುರಿಗೆ ತಂದೆ–ತಾಯಿಯರು ಯಾವತ್ತೂ ಜಗಳವಾಡಬಾರದು; ಅದು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ನೀನು ಇವತ್ತಿನಿಂದ ತಾಳ್ಮೆ ಬೆಳೆಸಿಕೋ. ಆಗ ಮನೆ ಶಾಂತವಾಗಿರುತ್ತದೆ ಎಂದು.'

'ಅವರು ಅಮ್ಮನಿಗೆ ಬುದ್ಧಿ ಹೇಳಬಹುದಿತ್ತಲ್ವಾಪ್ಪ.'

'ಆಗ ನಿಮ್ಮಮ್ಮ ಅತ್ತೆ–ಮಾವ ಕಾಟ ಕೊಡ್ತಾರೇಂತ ಆಕಾಶ ಭೂಮಿ ಒಂದು ಮಾಡಿರ್ತಿದ್ದಳು. ನನ್ನ ಹತ್ತಿರ ಇದ್ದ ಸಲಿಗೆ ಅವರಿಗೆ ಸೊಸೆಯ ಬಳಿ ಇರಲಿಲ್ಲ.'

ತಂದೆಯ ಮಾತು ಕೇಳಿ ಅವಳಿಗೆ ಅವರ ಮೇಲಿದ್ದ ಗೌರವ ಇಮ್ಮಡಿಯಾಗಿತ್ತು. ನಂತರ ಓದು, ಕೆಲಸ, ಮದುವೆ, ಸಂಸಾರದಲ್ಲಿ ಮುಳುಗಿಹೋಗಿದ್ದಳು. ಅವಳು ಇಂಗ್ಲಿಷ್ ಎಂ.ಎ. ಮಾಡಿದ್ದಳು. ಗಂಡ ಮಾಧವ ಡಾಕ್ಟರ್. ಅವಳು ಮದುವೆಯ ನಂತರ ಮಂಗಳೂರಿನಲ್ಲೇ ಕೆಲಸಕ್ಕೆ ಸೇರಿದ್ದಳು. ಅವಳು ಮೊದಲ ಬಾರಿ ಗರ್ಭಿಣಿಯಾದಾಗ ಮಾಧವ 'ಡೆಲಿವರಿಯ ನಂತರ ನೀನು ಒಂದು ತಿಂಗಳು ಇಲ್ಲೇ

